ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

347 (2348) ಶ್ರೀ ಪ್ರಕಾಶ್. ಬಾಬಣ್ಣ ಹುಕ್ಕೇರಿ (ಸದಲಗ) :– ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ಅಧೀನಲ್ಲಿನ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – 2 (KSHIP - II) ರಲ್ಲಿ ರಾಜ್ಯದ 4887.43 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲು ಕೈಗೆತ್ತಿಕೊಳ್ಳಲಾಗಿದ್ದರೂ ಕೇವಲ 3,411 ಕಿ.ಮೀ ರಸ್ತೆಗೆ ಸೀಮಿತಗೊಳಿಸಿ ಉಳಿದ ಕಿ.ಮೀಗಳ ರಸ್ತೆಯನ್ನು ಕೈಬಿಡಲು ಕಾರಣಗಳೇನು;

ಆ) ಬಾಕಿ ಉಳಿದಿರುವ 1476.43 ಕಿ.ಮೀಗಳನ್ನು (KSHIP - II) ಯೋಜನೆಯಲ್ಲಿಯೇ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳುವುದೇ ;

ಇ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) ಸರ್ಕಾರವು ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಶಿಪ್–1) ಯೋಜನೆಯಲ್ಲಿ ಸಾಧಿಸಲಾದ ಉದ್ದೇಶಿತ ಗುರಿಗಳು, ಏಕಪಥ ರಾಜ್ಯ ಹೆದ್ದಾರಿ ರಸ್ತೆಗಳಲ್ಲಿ ಇರುವ ತೊಡಕುಗಳು ಮತ್ತು ತಾಲ್ಲೂಕು ಕೇಂದ್ರಗಳನ್ನು ಉತ್ತಮ ದರ್ಜೆಯ ರಸ್ತೆಗಳ ಮೂಲಕ ಸಂಪರ್ಕ ಏರ್ಪಡಿಸುವ ಅವಶ್ಯಕತೆಗಳನ್ನು ಮನಗಂಡು ಮತ್ತಷ್ಟು ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿ ಸುಮಾರು 3000 ಕಿ.ಮೀ.ಗಳನ್ನು ಸುಮಾರು 3,000 ಕೋಟಿ ರೂ.ಗಳ ಖರ್ಚಿನಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – 2 ರ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಪೂರ್ವ ಯೋಜನಾ ಅಧ್ಯಯನಗಳನ್ನು (pre project activities) ಕೈಗೊಳ್ಳಲು ನಿರ್ಧಾರ ತೆಗೆದುಕೊಳ್ಳಲಾಯಿತು.

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಶಿಪ್) ನಂತಹ ಯಾವುದೇ ದೊಡ್ಡ ಗಾತ್ರದ ರಸ್ತೆ ಅಭಿವೃದ್ಧಿ ಯೋಜನೆಗಳನ್ನು ವಿಶ್ವ ಬ್ಯಾಂಕ್‌ನಂತಹ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಅಥವಾ ಭಾರತೀಯ ಹಣಕಾಸು ಸಂಸ್ಥೆಗಳ ಮುಂದೆ ಮಂಡಿಸಲು ಈ ಕೆಳಕಂಡ ಅಧ್ಯಯನಗಳನ್ನು ಕೈಗೊಳ್ಳಬೇಕಾದ ಅಗತ್ಯವಿರುತ್ತದೆ.

i) ರಸ್ತೆ ಜಾಲದ ಆಯ್ಕೆ ತಂತ್ರ ಅಧ್ಯಯನ (SOS)

ii) ಕಾರ್ಯಸಾಧ್ಯತೆ ಅಧ್ಯಯನ (Feasibility study)

iii) ವಿವರವಾದ ಯೋಜನಾ ವರದಿ (DPR)

ರಸ್ತೆ ಜಾಲದ ಆಯ್ಕೆ ತಂತ್ರ ಅಧ್ಯಯನ (SOS) ನಂತೆ 4888 ಕಿ.ಮೀ ಉದ್ದದ ರಾಜ್ಯ ಹೆದ್ದಾರಿ ರಸ್ತೆಯನ್ನು ಆಯ್ಕೆಮಾಡಿ ಸದರಿ ಆಯ್ಕೆ ಮಾಡಲಾದ ರಸ್ತೆಗಳ ಕಾರ್ಯಸಾಧ್ಯತಾ ಅಧ್ಯಯನ (Feasibility study) ಮಾಡಲಾಗಿ ವಿವಿಧ ಅರ್ಹತ ಮಾನದಂಡಗಳ ವಿಶ್ಲೇಷಣೆಯನ್ನು ಅಳವಡಿಸಿಕೊಳ್ಳಲಾಗಿ ಶೇಕಡ 80 ಮೌಲ್ಯವನ್ನು ಎಕನಾಮಿಕ್ ಇಂಟರ್ನಲ್ ರೇಟ್ ಆಫ್ ರಿಟರ್ನ್ (EIRR) ಮತ್ತು ಶೇಕಡ 20 ಮೌಲ್ಯವನ್ನು ಪ್ರಾದೇಶಿಕ ಅಸಮಾನತೆಗಳ ನಿವಾರಣೆಗಾಗಿ ಡಾ॥ ನಂಜುಂಡಪ್ಪ ನೇತೃತ್ವದಲ್ಲಿ ರಚಿತಗೊಂಡಿರುವ ಮೇಲ್ಮಟ್ಟದ ಸಮಿತಿಯ ವರದಿಯಲ್ಲಿನ ಡಿಪ್ರೈವೇಷನ್ ಸೂಚ್ಯಂಕಕ್ಕು (Deprivation Index) ನೀಡಲಾಗಿದ್ದು ಹಾಗೂ ಕೆಲವು ಜಿಲ್ಲೆಗಳನ್ನು ಪ್ರತಿನಿಧಿಸದೆ ಇರುವುದು ಗಣನೆಗೆ ತೆಗೆದುಕೊಂಡು ಅಂತಿಮವಾಗಿ 3,411 ಕಿ.ಮೀ ರಸ್ತೆಗಳ ಅಭಿವೃದ್ಧಿ ಬಗ್ಗೆ ಯೋಜನಾ ವರದಿಯನ್ನು ತಯಾರಿಲಾಗುತ್ತಿದೆ.

ಆ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – II ಅಡಿಯಲ್ಲಿ ಕೈಗೊಳ್ಳಲು ಸಾಧ್ಯವಿರುವುದಿಲ್ಲ.

ಇ) "ಅ" ನಲ್ಲಿ ನೀಡಲಾದ ಉತ್ತರದ ಹಿನ್ನೆಲೆಯಲ್ಲಿ ಮತ್ತು ಈ ಯೋಜನೆಯ ಗಾತ್ರವನ್ನು ಸೀಮಿತಗೊಳಿಸುವ ನಿಟ್ಟಿನಲ್ಲಿ ಉಳಿದಿರುವ ಕಿ.ಮೀ ಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಿರುವುದಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– ಕೆಶಿಪ್ – 1 ರಲ್ಲಿ ಸುಮಾರು 25 ನೂರು ಕಿಲೋಮೀಟರ್ ರಸ್ತೆಯನ್ನು World Bank ಸಹಯೋಗದಿಂದ ಬಹಳ ಚೆನ್ನಾಗಿ ಮಾಡಿದ್ದಾರೆ. ಕೆಶಿಪ್ – 2 ರಲ್ಲಿ ಸರ್ಕಾರದವರು World Bank ನ ಸಹಯೋಗದಿಂದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈಗ ಒಂದು project report ಅನ್ನು ತಯಾರು ಮಾಡಿ ಸುಮಾರು 70 ಕಾಮಗಾರಿಗಳನ್ನು 4888 ಕಿಲೋಮೀಟರ್ ರಸ್ತೆಯ ಒಂದು project ಅನ್ನು ತಯಾರಿಸಿ, ಆ 70 ಕಾಮಗಾರಿಗಳನ್ನು 38 ಕಾಮಗಾರಿಗೆ ಈಗಾಗಲೇ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಉಳಿದ 1477 ಕಿಲೋಮೀಟರ್ ರಸ್ತೆಯನ್ನು ಕೈಬಿಟ್ಟಿದ್ದಾರೆ. 1477 ಕೀಲೋಮೀಟರ್ ರಸ್ತೆ ಬಹುತೇಕ ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಭಾಗದಲ್ಲಿ ಬರುವುದರಿಂದ, ದಯವಿಟ್ಟು ಇದಕ್ಕೆ World Bank ನ ಸಹಾಯ ಸಿಗುವುದರಿಂದ ಸಂಪೂರ್ಣವಾಗಿ 4888 ಕಿಲೋಮೀಟರ್ ರಸ್ತೆಯನ್ನು ತೆಗೆದುಕೊಂಡರೆ ಇದು ಒಳ್ಳೆಯ ಕಾರ್ಯಕ್ರಮವಾಗುತ್ತದೆ. ಜೊತೆಗೆ ಬಿಟ್ಟು ಹೋಗಿರುವ ರಸ್ತೆಗಳು ಏನು ಇವೆ, ಅವುಗಳನ್ನು ಇದರಲ್ಲಿ ಸೇರಿಸಿಕೊಳ್ಳಬೇಕು. ಏಕೆಂದರೆ, 25–11–2006 ರಲ್ಲಿ Proceedings ಆಗಿದೆ. ಅದರಲ್ಲಿ ಮೂರು ಸಾವಿರ ಕೋಟಿ ರೂಪಾಯಿಗಳ ಖರ್ಚಿನಲ್ಲಿ ಈ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಇದೆ. ಹೀಗಾಗಿ ಉಳಿದ ರಸ್ತೆಯನ್ನು ಇದರಲ್ಲಿ ಸೇರಿಸಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(11–30 ಘಂಟೆ)

ಶ್ರೀ ಎಂ.ಪಿ. ಪ್ರಕಾಶ್ (ಲೋಕೋಪಯೋಗಿ ಸಚಿವರ ಪರವಾಗಿ) :– ಸನ್ಮಾನ್ಯ ಅಧ್ಯಕ್ಷರೆ, ಅವರು ಈಗಾಗಲೇ ತಿಳಿಸಿದಂತೆ 19 ಜಿಲ್ಲೆಗಳಲ್ಲಿ 2375 ಕಿ.ಮೀ. ಉದ್ದದ ರಸ್ತೆ ಕಾಮಗಾರಿಗಳನ್ನು ಹಮ್ಮಿಕೊಂಡಿದ್ದು, ಇದರಲ್ಲಿ 900 ಕಿ.ಮೀ ನಷ್ಟು ರಾಜ್ಯದ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಮತ್ತು 1475 ಕಿ.ಮೀ ಉದ್ದದ...

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :– ತಾವು ಕೆಶಿಪ್ – 1 ಯೋಜನೆಯ ಬಗ್ಗೆ ಹೇಳುತ್ತಿದ್ದೀರಿ. ಕೆಶಿಪ್ – 1 ಯೋಜನೆಯಲ್ಲಿ ಒಳ್ಳೆಯ ಕೆಲಸವಾಗಿದೆ. ಆದರೆ, ನಮಗೆ ಕೆಶಿಪ್ – 2 ಯೋಜನೆಯ ಬಗ್ಗೆ ದಯವಿಟ್ಟು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಈಗ ಎರಡನೇ ಹಂತದ ಯೋಜನೆಯಲ್ಲಿ 4888 ಕಿ.ಮೀ ಉದ್ದದ ರಸ್ತೆಯನ್ನು ಪರಿಗಣಿಸಬೇಕೆಂದು ಸದರಿ ಯೋಜನೆಯನ್ನು ತಯಾರು ಮಾಡುವಂಥದಾಗಿತ್ತು. ಇದರಲ್ಲಿ ಶೇಕಡ 80 ರಷ್ಟು ಮೌಲ್ಯದ ಹಣವನ್ನು economic internal rate of returns ಎಂದು ಹೇಳಿ ರಸ್ತೆಯ ಕಾಮಗಾರಿಯಿಂದ ನಮಗೆ ಮರುಪಾವತಿಯಾಗಿ ಬರತಕ್ಕಂಥ ಆದಾಯ ಎಷ್ಟು ಎನ್ನತಕ್ಕಂಥದರ ಬಗ್ಗೆ ಲೆಕ್ಕಾಚಾರ ಮಾಡುತ್ತಾರೆ. ಅದೇ ರೀತಿಯಾಗಿ ಡಾ॥ ನಂಜುಂಡಪ್ಪನವರು ಕೊಟ್ಟಿರುವ ವರದಿಯ ಆಧಾರದ ಮೇಲೆ ಡಿಪ್ರೈವೇಷನ್ ಸೂಚ್ಯಕ ನೀಡಲಾಗಿದ್ದು, ಅಲ್ಲಿ ಅನುಕೂಲಗಳು ಮತ್ತು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರತಕ್ಕಂಥ ತಾಲ್ಲೂಕುಗಳು ಮತ್ತು ಅತಿ ಹಿಂದುಳಿದ ತಾಲ್ಲೂಕುಗಳು, ಹಿಂದುಳಿದ ತಾಲ್ಲೂಕುಗಳು ಮತ್ತೆ ಬೇರೆ ತಾಲ್ಲೂಕುಗಳಿಗೆ ಹೋಲಿಸಿದಾಗ ಉಳಿದಿರುವ ಹಿಂದುಳಿದ ತಾಲ್ಲೂಕುಗಳಿಗೆ ಶೇಕಡ 20 ಅನ್ನು ಸೇರಿಸಿ ಕೊಡುತ್ತಾರೆ. ಆ ರೀತಿ ಸೇರಿಸಿಕೊಂಡಾಗ 3411 ಕಿ.ಮೀ ಉದ್ದದ ರಸ್ತೆಯನ್ನು, ಈ ಉದ್ದೇಶದಿಂದ ಆಯ್ಕೆ ಮಾಡಿದ ವಿವರವಾದ ಯೋಜನೆಯನ್ನು ತಯಾರು ಮಾಡಲಾಗಿದೆ. ಈಗ ತಾವು ಹೇಳಿದಂತೆ ವಿಶ್ವ ಬ್ಯಾಂಕ್‌ನವರು ಈ ಯೋಜನೆಯನ್ನು ತಯಾರು ಮಾಡುವ ಮತ್ತು ಸರ್ವೆ ಮಾಡುವ ಪೂರ್ವಕ ವಿಚಾರಗಳಿಗೆ ಹಣವನ್ನು ಕೊಟ್ಟಿದ್ದಾರೆಯೇ ವಿನಃ ಈ ಯೋಜನೆಗೆ ಒಪ್ಪಿಗೆ ಕೊಟ್ಟು, ಇದಕ್ಕಾಗಿ ಅವರು ಹಣವನ್ನು ಕೊಟ್ಟಿಲ್ಲ. ವಿವಿಧ ಸಂಘ ಸಂಸ್ಥೆಗಳಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಹಣವನ್ನು ಇದಕ್ಕಾಗಿ ತೆಗೆದುಕೊಳ್ಳಬೇಕೆಂದು ಆಗಿದೆ. ತಾವು ಹೇಳಿದಂತೆ ಗಡಿ ಭಾಗದಲ್ಲಿರತಕ್ಕಂಥ ರಸ್ತೆಗಳ ಅಭಿವೃದ್ಧಿ ಬಹಳ ಮುಖ್ಯವಾಗಿರುವ ಕಾರಣ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಬಂದ ತಕ್ಷಣವೇ ಅವರ ಜೊತೆ ಮಾತನಾಡಿ, ತಮ್ಮ ನ್ಯಾಯ ಸಮ್ಮತವಾದ ಈ ಬೇಡಿಕೆಯಲ್ಲಿ, ಅಂದರೆ, ಈಗೇನು ಇರುವ 3411 ಕಿ.ಮೀ ರಸ್ತೆಯಲ್ಲಿ ಇದನ್ನೂ ಕೂಡ ಸೇರಿಸಬೇಕೆಂದು

ಎಂದು ಹೇಳಿದ್ದೀರಿ, ಇದರಲ್ಲಿ ರಿಟರ್ನ್ಸ್ ಬರುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥ ವಿಚಾರ ಇರಬಹುದು. ಆದರೆ, ಇದೊಂದು ವಿಶೇಷವಾಗಿದ್ದು, ಮಾನ್ಯ ನಂಜುಂಡಪ್ಪನವರ ವರದಿಯ ಪ್ರಕಾರ 20% ಡಿಪ್ರೈವೇಷನ್ ಸೂಚ್ಯಂಕದ ಪರವಾಗಿಯಾದರೂ ಇದನ್ನು ತೆಗೆದುಕೊಳ್ಳಬೇಕೆಂದು ಅವರಲ್ಲಿ ನಾನು ಮನವೊಲಿಸುತ್ತೇನೆ. ಮತ್ತೆ ನೀವು.ಮತ್ತು ನಾವು ಸೇರಿ ಅವರಿಗೆ ಒಪ್ಪಿಸಿ ಆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಮಾಡೋಣ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :– ಮಾನ್ಯ ಅಧ್ಯಕ್ಷರೆ, ಈಗ ರಸ್ತೆಯ ಒತ್ತಡದ ಮೇಲೆ ಒಂದು ಮ್ಯಾಪ್ ತಯಾರು ಮಾಡಿದ್ದಾರೆ. ಈ ರಸ್ತೆಯ ಒತ್ತಡದ ವಿಚಾರ ಇಟ್ಟುಕೊಂಡು ಸುಮಾರು 70 ರಸ್ತೆಗಳನ್ನು ಗುರುತಿಸಲಾಗಿದೆ. ಇದರ ಉದ್ದ 4888 ಕಿ.ಮೀ. ನಷ್ಟಿದೆ. ಆದರೆ, 20% ನಷ್ಟು ರಸ್ತೆ ಒತ್ತಡ ಬದಲಾಗಿ 80% ನಷ್ಟು ಮೇಲೆ ರಸ್ತೆ ಒತ್ತಡದ ಬಗ್ಗೆ ತಾವು ಏನು ಹೇಳುತ್ತಿರುವುದು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂಥ ಮ್ಯಾಪ್ ನನ್ನ ಹತ್ತಿರ ಇದೆ. ಮತ್ತೆ ಇದರಲ್ಲಿ ಸೀರಿಯಲ್ ನಂಬರ್ ಕೂಡ ಮೆನ್‌ಷನ್ ಮಾಡಿದ್ದಾರೆ. ನಾನು ತಮ್ಮಲ್ಲಿ ಕಳಕಳಿಯ ವಿನಂತಿ ಮಾಡುವುದೇನೆಂದರೆ, ಗಡಿ ಪ್ರದೇಶದಲ್ಲಿರತಕ್ಕಂಥ ರಸ್ತೆಗಳು ಇವತ್ತಿನ ದಿವಸ ತುಂಬಾ ಹಾಳಾಗಿವೆ. ದಯವಿಟ್ಟು ಇವುಗಳನ್ನು ಇದರಲ್ಲಿ ಸೇರ್ಪಡೆ ಮಾಡಿಕೊಂಡು ಮಾಡಬೇಕು. ನೀವು ವಿಶ್ವಬ್ಯಾಂಕ್ ನಿಂದ ಸಹಾಯ ತೆಗೆದುಕೊಳ್ಳುತ್ತೀರಿ. ಆದ್ದರಿಂದ ಇಲ್ಲಿ 3 ಸಾವಿರ ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುವ ಬದಲು 4 ಸಾವಿರ ಕೋಟಿ ರೂಪಾಯಿಗಳನ್ನು ತೆಗೆದುಕೊಂಡರೆ ಏನಾಗುವುದಿಲ್ಲ. ಆದ್ದರಿಂದ ಯಾವುದಾದರೂ ಪರಿಸ್ಥಿತಿಯಲ್ಲಿ ಇದನ್ನು ಸೇರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಇದೇ ರೀತಿಯಾದ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಲೋಕೋಪಯೋಗಿ ಸಚಿವರ ಜೊತೆಯಲ್ಲಿ ಮಾತನಾಡುತ್ತೇನೆಂದು ತಾವು ಹೇಳಿದ್ದೀರಿ. ಆದರೆ, ನಮಗೆ ಇದೆಲ್ಲಾ ಬೇಕಾಗಿಲ್ಲ. ತಾವು ಹಿರಿಯ ಸಚಿವರು ಇದ್ದೀರಿ ಮತ್ತೆ ನಿಮ್ಮ ವಿಚಾರದ ಬಗ್ಗೆ ನಮಗೆ ಚೆನ್ನಾಗಿ ಗೊತ್ತಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ಭಾಗದ ವಿಷಯದ ಬಗ್ಗೆ ಮಾತನಾಡುತ್ತೇವೆ. ಆದ್ದರಿಂದ ಬೆಳಗಾಂ ಗಡಿ ಭಾಗದ ರಸ್ತೆಗಳು ಇದರಲ್ಲಿ ಬಂದಿವೆ. ಆದ್ದರಿಂದ ಕೊನೇಪಕ್ಷ ಇವುಗಳನ್ನಾದರೂ ಇದರಲ್ಲಿ ಸೇರ್ಪಡೆ ಮಾಡುತ್ತೇವೆಂದು ಹೇಳಿದರೆ ನಮಗೆ ಸಂತೋಷವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಭೋಸರಾಜ್ :– ಮಾನ್ಯ ಅಧ್ಯಕ್ಷರೆ, ಕೆಶಿಪ್ – 2 ನೇ ಯೋಜನೆಯಲ್ಲಿ ರಾಯಚೂರು ಜಿಲ್ಲೆಗೆ ಬಹಳ ಅನ್ಯಾಯವಾಗಿದೆ. ಈಗಾಗಲೇ, ಹಿರಿಯ ಸದಸ್ಯರಾಗಿರುವ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಮಾತನಾಡುವಂಥ ಸಂದರ್ಭದಲ್ಲಿ ನಂಜುಂಡಪ್ಪನವರ ವರದಿಯ ಪ್ರಕಾರ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಅವಕಾಶ ಸಿಗಬೇಕೆಂಬ ಮಾತನ್ನು

ಹೇಳಿದ್ದಾರೆ. ನಮ್ಮ ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳೆಂದು ಗುರುತಿಸಲಾಗಿದೆ. ಮತ್ತೆ ಇದು ಆಂಧ್ರಪ್ರದೇಶದ ಗಡಿಯಲ್ಲಿ ತುಂಗಭದ್ರಾ ನದಿಯು ಹರಿಯುತ್ತದೆ. ಈಗಾಗಲೇ ಲಿಂಗಸಗೂರು ಕ್ಷೇತ್ರದ ಶಾಸಕರು ಮತ್ತು ಕಲ್ಮಲ ಕ್ಷೇತ್ರ ಶಾಸಕರು ಮತ್ತು ರಾಯಚೂರು ಜಿಲ್ಲೆಯ ಶಾಸಕರೆಲ್ಲೂ ಮಾನ್ಯ ಲೋಕೋಪಯೋಗಿ ಸಚಿವರನ್ನು ಭೇಟಿ ಮಾಡಿ ರಾಮದುರ್ಗಾದಿಂದ ಪ್ರಾರಂಭವಾಗಿ ಮುದಗಲ್, ಮಸ್ಕಿ, ತೋರಣದಿನ್ನಿ, ಪೋತನಾಳ, ಚಿಕ್ಕಲ್‌ಪರಿ ಮುಖಾಂತರ ಹಾದು ಹೋಗುವ ಸುಮಾರು 245 ಕಿ.ಮೀ ರಸ್ತೆಯನ್ನು ಅದರಲ್ಲಿ ಸೇರಿಸಬೇಕೆಂದು ನಾವು ಸಾಕಷ್ಟು ಬಾರಿ ವಿನಂತಿ ಮಾಡಿದ್ದೇವೆ. ಇದು ತುಂಗಭದ್ರಾ ನದಿ ದಂಡೆಯಲ್ಲಿ ಮತ್ತು ಬಾರ್ಡರ್ ಏರಿಯಾದಲ್ಲಿದೆ. ಮತ್ತೆ ನಂಜುಂಡಪ್ಪ ವರದಿ ಪ್ರಕಾರ ಈ ಪ್ರದೇಶಗಳು ಅತೀ ಹಿಂದುಳಿದ ಪ್ರದೇಶವಾಗಿರುವುದರಿಂದ ಈ ರಸ್ತೆಯನ್ನು ಕೈಗೆತ್ತಿಕೊಳ್ಳಬೇಕೆಂದು ನಾವು ಅವರಲ್ಲಿ ವಿನಂತಿ ಮಾಡಿದ್ದೆವು. ಆದರೆ, ಅದನ್ನು ಇವತ್ತಿನ ದಿವಸ ಡ್ರಾಪ್ ಮಾಡಿದ್ದಾರೆ. ಇಡೀ ರಾಯಚೂರು ಜಿಲ್ಲೆಯಲ್ಲಿ ಕೇವಲ 80 ಕಿ.ಮೀ ನಷ್ಟು ರಸ್ತೆಗೆ ಮಾತ್ರ ಅವಕಾಶವನ್ನು ಕಲ್ಪಿಸಿದ್ದಾರೆ. ಆದ್ದರಿಂದ ನಮ್ಮ ರಾಯಚೂರು ಜಿಲ್ಲೆಗೆ ಕೆಶಿಪ್ – 2 ನೇ ಯೋಜನೆಯಲ್ಲಿ ಬಹಳಷ್ಟು ಅನ್ಯಾಯವಾಗಿದೆ. ಅದನ್ನು ಸರಿಪಡಿಸಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :– ಎಲ್ಲರೂ ಇಷ್ಟೊಂದು ಉಪ ಪ್ರಶ್ನೆಗಳನ್ನು ಕೇಳಿದರೆ ಹೇಗೆ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ವಿಷಯವಾಗಿದೆ.

ಅಧ್ಯಕ್ಷರು :– ಎಲ್ಲವೂ ಕೂಡ ಮುಖ್ಯವಾಗಿರುತ್ತವೆ. ಆದರೆ, ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕಲ್ಲವೇ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇದೊಂದು ನಿರ್ದಿಷ್ಟವಾದಂಥ ವಿಷಯವಾಗಿರುವುದರಿಂದ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳೇ ಭರವಸೆ ಕೊಡಬೇಕಾಗುತ್ತದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :– ಮಾನ್ಯ ಅಧ್ಯಕ್ಷರೆ, ಕೆಶಿಪ್ – 2 ನೇ ಹಂತದ ಕಾಮಗಾರಿಗಳನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕೆಂಬುದು ಇಡೀ ಸದನದ ಅಭಿಪ್ರಾಯವಾಗಿದೆ. ಬಹಳ ಮುಖ್ಯವಾಗಿ ನಮ್ಮ ರಸ್ತೆಗಳ ಸೌಲಭ್ಯವನ್ನು ಮೇಲ್ದರ್ಜೆಗೇರಿಸಬೇಕಾಗಿದೆ. ಆದ್ದರಿಂದ ಕೆಶಿಪ್ – 2 ನೇ ಹಂತದ ಕಾಮಗಾರಿಗಳನ್ನು

ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಮತ್ತೆ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಮೊದಲನೇ ಹಂತದಲ್ಲಿ M-24-25 ಮತ್ತು 25-26 ಪ್ಯಾಕೇಜ್‌ನಲ್ಲಿ ಶಿರಸಿ – ಯಲ್ಲಾಪುರ ಹಾಗೂ ಶಿರಸಿ–ಸಿದ್ದಾಪುರ ರಸ್ತೆಗಳು ಬರುತ್ತವೆ. ಆದರೆ, ಈ ಎರಡೂ ಪ್ಯಾಕೇಜ್‌ನಲ್ಲಿ ಕೆಲಸ ನಡೆಯುತ್ತಿಲ್ಲ. ಆದ್ದರಿಂದ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಅಲ್ಲಿ ಗುತ್ತಿಗೆದಾರ ಸಮಸ್ಯೆಯಿಂದ ಸಾಕಷ್ಟು ವಿಳಂಬವಾಗಿದೆ. ಆದ್ದರಿಂದ ತಕ್ಷಣ ಈಗ ಇರತಕ್ಕಂಥ ಗುತ್ತಿಗೆದಾರನಿಂದ ಕೆಲಸ ಮಾಡಿಸಬೇಕು ಅಥವಾ ಬೇರೆ ಗುತ್ತಿಗೆದಾರನಿಂದ ಮಾಡಿಸಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಕ್ಕೆ ಕಾರಣವಾಗಬೇಕು. ಉಳಿದ ಭಾಗವನ್ನು ಕೊನೇಪಕ್ಷ ಇಲಾಖೆ ವತಿಯಿಂದಾದರೂ ನಿರ್ವಹಣೆ ಮಾಡತಕ್ಕಂಥದರ ಬಗ್ಗೆ ಮಾಡಬೇಕು. ಕೆಶಿಪ್ ಗೆ ಈ ರಸ್ತೆಗಳು ಹ್ಯಾಂಡ್ ಓವರ್ ಆಗಿರುವುದರಿಂದ ಈ ರಸ್ತೆಗಳೂ ನಮಗೆ ಸಂಬಂಧವಿಲ್ಲವೆಂಬ ರೀತಿಯಲ್ಲಿ ಇವರು ಇದ್ದಾರೆ. ಅವರು ಈ ರಸ್ತೆಗಳನ್ನು ಮಾಡುತ್ತಿಲ್ಲ, ಇವತ್ತಿನ ದಿವಸ ಈ ರಸ್ತೆಗಳಲ್ಲಿ ಯಾರೂ ಓಡಾಡದೇ ಇರತಕ್ಕಂಥ ಸ್ಥಿತಿಯಲ್ಲಿದೆ. ಆದ್ದರಿಂದ M-24-25 ಮತ್ತು 25-26 ಪ್ಯಾಕೇಜ್‌ನಲ್ಲಿ ಶಿರಸಿ – ಯಲ್ಲಾಪುರ ಹಾಗೂ ಶಿರಸಿ–ಸಿದ್ದಾಪುರ ರಸ್ತೆಗಳ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಅನುಷ್ಠಾನಗೊಳಿಸುವಂತೆ ಮಾಡಬೇಕು. ಏಕೆಂದರೆ, ಈ ರಸ್ತೆಗಳಿಂದ ಬಹಳ ತೊಂದರೆಯಾಗಿದೆ. ಆದ್ದರಿಂದ 2 ನೇ ಹಂತದ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಮತ್ತು ಒಂದನೇ ಹಂತದ ಕಾಮಗಾರಿಗಳಲ್ಲಿ ಯಾವ್ಯಾವುದು ವಿಳಂಬವಾಗುತ್ತಿದೆಯೋ ಅಂಥವುಗಳನ್ನು ತ್ವರಿತಗೊಳಿಸುವುದಕ್ಕೆ ಮಾನ್ಯ ಸಚಿವರು ವಿಶೇಷ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :– ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಇದು ಬಹಳ ಪ್ರಮುಖವಾದಂಥ ವಿಷಯವಾಗಿದೆ.

ಅಧ್ಯಕ್ಷರು :– ಯಾವುದು ಪ್ರಮುಖ ವಿಷಯವಲ್ಲ ಹೇಳಿ? ಒಂದು ನಿಮಿಷದಲ್ಲಿ ಮಾತನ್ನು ಮುಗಿಸಬೇಕು.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಕೆಶಿಪ್ – 2 ರಲ್ಲಿ 4888 ರಸ್ತೆಗೆ ಈಗಾಗಲೇ ಸರ್ವೆಯನ್ನು ಮಾಡಿದ್ದಾರೆ. ಆದರೆ, ಇದರಲ್ಲಿ ಕೇವಲ 3411 ಕಿ.ಮೀ ತೆಗೆದುಕೊಂಡಿರುವುದರಿಂದ ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕುಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಬಹಳ

ಅನ್ಯಾಯವಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಮನವಿ ಮಾಡುವುದೇನೆಂದರೆ, ಇವತ್ತು 3411 ಕಿ.ಮೀ. ತೆಗೆದುಕೊಳ್ಳುವ ಬದಲು ಸಂಪೂರ್ಣವಾಗಿರತಕ್ಕಂಥ 4888 ಕಿ.ಮೀ. ಉದ್ದದವರೆಗಿನ ರಸ್ತೆಯನ್ನು ತೆಗೆದುಕೊಂಡರೆ ರಾಜ್ಯಾದ್ಯಂತ ಒಂದು ಒಳ್ಳೆಯ ರೋಡ್ ನೆಟ್‌ವರ್ಕ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ವಿಶ್ವಬ್ಯಾಂಕ್‌ನಿಂದ ಲೋನ್ ತೆಗೆದುಕೊಳ್ಳುವಾಗ ಇಲ್ಲಿಗೆ ಸೀಮಿತಗೊಳಿಸದೆ ಈಗಾಗಲೇ ನಿಗದಿಯಾಗಿರುವ 4888 ಕಿ.ಮೀ. ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೆ, ಕೆಶಿಪ್ ಕೆಲಸಕ್ಕೆ ನಂಜುಂಡಪ್ಪನವರ ವರದಿ ಗೈಡ್‌ಲೈನ್ಸ್ ಆಗುವುದಾದರೆ, ನಂಜುಂಡಪ್ಪ ವರದಿ ಬಗ್ಗೆ ಸದನದಲ್ಲಿ ಒಂದು ಸಾರಿ ಚರ್ಚೆಯಾಗಬೇಕು. ನಂಜುಂಡಪ್ಪ ವರದಿಯಲ್ಲಿ ಯಾವ್ಯಾವ ಕಾರ್ಯಕ್ರಮದಲ್ಲಿ ಯಾವ್ಯಾವ ಜಿಲ್ಲೆಯನ್ನು ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಇಲ್ಲಿ ಚರ್ಚೆ ಆಗಬೇಕು. ಏಕೆಂದರೆ, ನಂಜುಂಡಪ್ಪನವರ ವರದಿ ಬಗ್ಗೆ ಇಲ್ಲಿ ಚರ್ಚೆಯಾಗಿಲ್ಲ. ನಾವು ಪ್ರತಿಸಾರಿ ನಂಜುಂಡಪ್ಪನವರ ವರದಿ ಬಗ್ಗೆ ಮಾತನಾಡುತ್ತೇವೆ. ಆದರೆ, ಇದರಲ್ಲಿ ಏನು ಹೇಳಿದೆ ಎಂಬುದರ ಬಗ್ಗೆ ಗೊತ್ತಿಲ್ಲ. ಏಕೆಂದರೆ, ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ರಸ್ತೆಯನ್ನು ನಾನು ಮ್ಯಾಪ್‌ನಲ್ಲಿ ನೋಡಿದೆ. ಉಳಿದ ಭಾಗದ ಒಂದು ರಸ್ತೆಯನ್ನು ಕೆಶಿಪ್‌ನಲ್ಲಿ ಸೇರಿಸಿಲ್ಲ. ಉಳಿದ ಭಾಗಗಳಿಗೆ ಕೊಡಬಾರದೆಂದು ನಾನು ಹೇಳುವುದಿಲ್ಲ. ಆದರೆ, ಇಲ್ಲಿ ಏಕೆ ಕೊಟ್ಟಿಲ್ಲ? ಗೈಡ್‌ಲೈನ್ಸ್ ಪ್ರಕಾರ ಏನಿದೆ ಎಂಬುದು ಗೊತ್ತಾಗಬೇಕಲ್ಲವೇ? ಅದರಲ್ಲಿ ಕಂಪ್ಲೀಟ್ ಬ್ಲ್ಯಾಂಕ್ ಇದೆ. ಆದ್ದರಿಂದ ನಮ್ಮ ಭಾಗಕ್ಕೆ ಏಕೆ ಕೊಟ್ಟಿಲ್ಲವೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :– ಮಾನ್ಯ ಅಧ್ಯಕ್ಷರೆ, ಕೆಶೀಪ್‌ನ ಪ್ರಾಜೆಕ್ಟ್ – 2 ರಲ್ಲಿ ಈಗಾಗಲೇ 3411 ಕಿ.ಮೀ ತೆಗೆದುಕೊಂಡಿದ್ದೀರಿ. ಇದರಲ್ಲಿ ಸಿಆರ್‌ಎಫ್‌ನ ರಸ್ತೆಗಳು ಬಂದಿವೆ ಮತ್ತು ನಬಾರ್ಡ್ ರಸ್ತೆಗಳು ಸಹ ಬಂದಿವೆ. ಮತ್ತು ಈಗಾಗಲೇ ಕೊಟ್ಟಿರತಕ್ಕಂಥ ರಸ್ತೆಗಳಿಗೆ ತಾವು ಈಗ ಅನುಮೋದನೆ ಕೊಟ್ಟಿದ್ದೀರಿ. ಆದ್ದರಿಂದ, ಆ ರಸ್ತೆಗಳನ್ನು ಕೈಬಿಟ್ಟರೆ ಈ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೂ ಕೂಡ ಅನುಕೂಲವಾಗುತ್ತದೆ. ನಿನ್ನೆ ದಿವಸ ಸಿಆರ್‌ಎಫ್‌ನ ಲಿಸ್ಟ್ ನೋಡಿದಾಗ ಕೆಶಿಪ್– 2 ರಲ್ಲಿ ತಾವು ಪ್ರಪೋಸಲ್ ಮಾಡಿರತಕ್ಕಂಥದ್ದರಲ್ಲಿಯೂ ಕೂಡ ಈ ರಸ್ತೆಗಳು ಬಂದಿವೆ. ಆದ್ದರಿಂದ ಇದನ್ನು ಮತ್ತೊಮ್ಮೆ ಮರುಪರಿಶೀಲನೆ ಮಾಡಿ ಯಾವ್ಯಾವ ರಸ್ತೆಗಳು ನಬಾರ್ಡ್ ಮತ್ತು ಸಿಆರ್‌ಎಫ್‌ನಲ್ಲಿ ಬರುತ್ತವೆ, ಅವುಗಳನ್ನು ಕೈಬಿಟ್ಟು, ಈ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತವೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ತಾವು ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರುಗಳ ಅಭಿಪ್ರಾಯ ಮತ್ತು ಕಳಕಳಿಯನ್ನು ಸರ್ಕಾರ ಮೆಚ್ಚುತ್ತದೆ. ದಿನಾಂಕ 29–09–2005 ರ ಸಚಿವ ಸಂಪುಟ ಸಭೆಯಲ್ಲಿ 2 ನೇ ಯೋಜನೆಯಲ್ಲಿ 3 ಸಾವಿರ ಕಿ.ಮೀ. ಉದ್ದದ ರಾಜ್ಯದ ಹೆದ್ದಾರಿಗೆ 3 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಖರ್ಚು ಮಾಡಬೇಕೆಂದು ನಿರ್ಧಾರವಾಗಿತ್ತು. ಆ ರೀತಿಯಾಗಿ ನಿರ್ಧಾರ ಮಾಡಿದಂಥ ಸಂದರ್ಭದಲ್ಲಿ ಕೆಲವು ಮಾನದಂಡಗಳನ್ನು ಮತ್ತು ಯಾವ ರೀತಿಯಾದಂಥ ಪೂರ್ವಬಾವಿ ಚಟುವಟಿಕೆಗಳನ್ನು ಮಾಡಬೇಕೆಂಬುದರ ಬಗ್ಗೆ ನಿರ್ಧಾರವಾಗಿದೆ. ಯೋಜನೆಯ ರಸ್ತೆ ಜಾಲದ ಆಯ್ಕೆ ಕಾರ್ಯತಂತ್ರದ ಅಧ್ಯಯನ (Strategic Option Study) ಎನ್ನತಕ್ಕಂಥದನ್ನು ಮತ್ತೆ ಮಾಡಲೇಬೇಕಾಗುತ್ತದೆ. ವಿಶ್ವಬ್ಯಾಂಕ್‌ನವರು ನಮಗೆ ಸಾಲ ಕೊಡುತ್ತಾರೆಂದರೆ, ನಾವು ಕೇಳಿದಷ್ಟು ಕೊಡುವುದಿಲ್ಲ ಮತ್ತೆ ನಾವು ಕೇಳಿದ ಯಾವುದೇ ರಸ್ತೆಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಆ ಕಾರಣಕ್ಕಾಗಿ ಸುಮಾರು 14090 ಕಿ.ಮೀ ಉದ್ದದ ರಸ್ತೆಯ ಹೆದ್ದಾರಿಗಳನ್ನು ಪರಿಗಣಿಸಿ ಎಂದು ಹೇಳಿ ಮಾಡಿದ ಮೇಲೆ ಅಂತಿಮವಾಗಿ ಯೋಜನೆಯ ರಸ್ತೆಯ ಜಾಗದ ಆಯ್ಕೆಯ ಕಾರ್ಯತಂತ್ರದ ಮೂಲಕವಾಗಿ 4888 ಕಿ.ಮೀ ರಸ್ತೆಯನ್ನು ಅಧ್ಯಯನಕ್ಕೆ ಒಳಪಡಿಸಲಾಯಿತು. ಅದನ್ನು ಒಳಪಡಿಸಿದ ಮೇಲೆ feasibility study ಎಂದು ಮಾಡಬೇಕಾಗುತ್ತದೆ. ಕಾರ್ಯಸಾಧುವಾಗಿರುವಂತಹ ಅಧ್ಯಯನದ ವರದಿಯನ್ನು ನಾವು ತರಿಸಿಕೊಳ್ಳಬೇಕಾಗುತ್ತದೆ. ಹಾಗಿದ್ದಾಗ ಮಾತ್ರ ವಿಶ್ವಬ್ಯಾಂಕ್‌ನವರು ಅದನ್ನು ಪರಿಗಣಿಸುತ್ತಾರೆ. ಅದಕ್ಕೆ ಈಗ ಸರ್ವೆ ಮಾಡಿಸುವಂತಹ ಎಲ್ಲಾ ಹಣವನ್ನು ವಿಶ್ವಬ್ಯಾಂಕ್‌ನವರು ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಅವರು ಆಯ್ಕೆ ಮಾಡಿರುವುದು ಈ 80% ನ್ನು Economic internal rate of return ಎನ್ನುವಂತಹ ಸೂತ್ರಕ್ಕೆ ಅಳವಡಿಸಬೇಕು. ಅಂದರೆ ಆ ಒಂದು ರಸ್ತೆಯನ್ನು ನಿರ್ಮಾಣ ಮಾಡುವಾಗ ನಮಗೆ ಎಷ್ಟು ಹಣ ಬರುತ್ತದೆ, ಅದು ಕಾರ್ಯಸಾಧುವಾಗುತ್ತದೆಯೇ? ಅದು ವ್ಯವಹಾರಿಕಾಗಿ ಆಗುತ್ತದೆಯೇ, ಲಾಭದಾಯಕವಾಗಿ ಅಲ್ಲದಿದ್ದರೂ ಕೂಡ ನಷ್ಟ ಆಗಬಾರದು, ಒತ್ತಡಗಳು ಏನು ಎನ್ನುವುದನ್ನು ಅವರು ಪರಿಗಣಿಸುತ್ತಾರೆ. ಕೇವಲ 20% ನ್ನು ಮಾತ್ರ deprivation index ಎಂದು ಹೇಳಿ ಡಾ॥ ನಂಜುಂಡಪ್ಪನವರ ಆಯೋಗದಲ್ಲಿ ಕೊಟ್ಟಿರುವುದು. ಅವೆಲ್ಲಾ ಮಾನದಂಡವನ್ನು ಇಟ್ಟುಕೊಂಡು ಕೊಟ್ಟಿರುವುದರಲ್ಲಿ 39 ತಾಲ್ಲೂಕುಗಳು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಅತ್ಯಂತ ಹಿಂದುಳಿದಿರುವಂತಹ ತಾಲ್ಲೂಕುಗಳು. ಸುಮಾರು 43 ಕ್ಕಿಂತ ಹೆಚ್ಚು ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳಾಗಿವೆ. Relatively backward ಎನ್ನುವಂತಹ ಪದವನ್ನು ಅಲ್ಲಿ ಬಳಸುತ್ತಾರೆ. ಹೀಗೆ ಇದ್ದಾಗ 3400 ಕಿ.ಮೀ. ಉದ್ದದ ಅಭಿವೃದ್ಧಿಪಡಿಸುವ ಉದ್ದೇಶದಿಂದ ವಿವರವಾದ ಯೋಜನೆಯನ್ನು 4888 ಕಿ.ಮೀ ರಸ್ತೆ ಅಂದರೆ ಮೊದಲ 3 ರಲ್ಲಿ 14090

ಕಿ.ಮೀ. ಇದ್ದದ್ದು 4888 ಕ್ಕೆ ಅಧ್ಯಯನಕ್ಕೆ ಒಳಪಡಿಸಿತ್ತು. ಇದರಲ್ಲಿ ಈ ಎರಡು ಮಾನದಂಡಗಳ ಹಿನ್ನೆಲೆಯಲ್ಲಿ ಮಾಡಿದಂತಹ ಅಧ್ಯಯನದ ವರದಿಯ ಮೇಲೆ 3411 ಕಿ.ಮೀ. ಬಗ್ಗೆ ವಿವರವಾದ ಯೋಜನೆಯನ್ನು ಅವರು ತಯಾರುಪಡಿಸಿದರು. ಇದನ್ನು ತಯಾರುಪಡಿಸಿ ಅದು ಈಗಾಗಲೇ ಆಗಿ ಹೋಗಿರುವಂತಹದ್ದು 25–01–2007 ರಲ್ಲಿ ಈ ಒಂದು ಗುತ್ತಿಗೆಗೆ ಸಹಿಯನ್ನು ಹಾಕಲಾಗಿದೆ. ಈ ಸಂದರ್ಭದಲ್ಲಿ ನಾವು ರಸ್ತೆಗಳನ್ನು ತೆಗೆದುಕೊಂಡಿರುತ್ತೇವೆ. ನಾವು ಹಿಂದುಳಿದಿರುವುದಕ್ಕೆ ಕಾರಣ ಅದೇ ಇರುತ್ತದೆ. ಇವೆಲ್ಲವೂ ಕಾರಣವಾಗಿರುವುದರಿಂದ ನೀವು ಹೇಳಿದಂತೆ " ಹುಚ್ಚು ಬಿಡದೆ ಮದುವೆ ಆಗದು, ಮದುವೆ ಆಗದೆ ಹುಚ್ಚು ಬಿಡದು" ಎನ್ನುವ ಹಾಗೆ ಈ ರಸ್ತೆಯ ಜಾಲಗಳ ಅಭಿವೃದ್ಧಿ ಆಗದೇ ಅಲ್ಲಿ ನಮಗೆ ವರಮಾನ ವಾಪಸ್ಸು ಬರುವುದಿಲ್ಲ. ಆ ವರಮಾನವು ವಾಪಸ್ಸು ಬರುವುದಿಲ್ಲವಾದ್ದರಿಂದ ಈ ರಸ್ತೆಗಳನ್ನು ಆ ಮಟ್ಟಕ್ಕೇರಿಸುವುದಕ್ಕೆ ಆಗುವುದಿಲ್ಲವೆಂದು ಈ ವರದಿಗಳೇ ಹೇಳುತ್ತವೆ. ಇದಕ್ಕೆ ಹಣವನ್ನು ಕೊಡುವಂತಹ ಮಹನೀಯರು ವಿಶ್ವಬ್ಯಾಂಕ್‌ನವರು, ಅವರು ಅವರದೇ ಆದಂತಹ ಮಾನದಂಡಗಳನ್ನು ಇಟ್ಟುಕೊಂಡಿದ್ದಾರೆ. ಆದರೆ ತಾವು ಒಂದು ಒಳ್ಳೆಯ ಮಾತನ್ನು ಹೇಳಿದ್ದೀರಿ. ಸಿಆರ್‌ಎಫ್‌ನಲ್ಲಿ ನಬಾರ್ಡ್‌ನಲ್ಲಿ ಏನು ರಸ್ತೆಗಳು ಸೇರಿಕೊಂಡಿವೆ, ಅವು ಇದರಲ್ಲಿ ಸೇರಿಸುವುದಕ್ಕೆ ಬರುತ್ತದೆಯೇ? ಒಂದು ಕಡೆ ಸಿಆರ್‌ಎಫ್‌ನಲ್ಲಿ ತೆಗೆದುಕೊಳ್ಳುವುದಕ್ಕೆ ಒಪ್ಪಿಗೆಯಾಗಿದೆ. ಇನ್ನೊಂದು ಕಡೆಯಲ್ಲಿ ನಬಾರ್ಡ್‌ನಲ್ಲಿಯೂ ಕೂಡ ಒಪ್ಪಿಗೆಯಾಗಿದೆ. ಈಗ ಇದರಲ್ಲಿ ಕೈಬಿಟ್ಟುಹೋಗಿದೆ. ಇದನ್ನು ಇಲ್ಲಿ ಏತಕ್ಕೆ ತೆಗೆದುಕೊಳ್ಳಬಾರದು ಎಂಬ ಪ್ರಶ್ನೆಯನ್ನು ಇಟ್ಟಿದ್ದೀರಿ. ಮಾನ್ಯ ಲೋಕೋಪಯೋಗಿ ಸಚಿವರು ಬಂದ ತಕ್ಷಣ ಅವರಿಗೆ ಈ ವಿಚಾರವನ್ನು ತಿಳಿಸುತ್ತೇನೆ. ನಮ್ಮ ಅಧಿಕಾರಿಗಳು ಎಲ್ಲರೂ ಇದ್ದಾರೆ, ಅವರ ಜೊತೆ ಮಾತನಾಡಿ ಕನಿಷ್ಟ ಸಿಆರ್‌ಎಫ್‌ನಲ್ಲಾದರೂ ತೆಗೆದುಕೊಳ್ಳುತ್ತೇವೆ. ನಬಾರ್ಡ್‌ನಲ್ಲಿಯೂ ತೆಗೆದುಕೊಳ್ಳುತ್ತೇವೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಇದು ಮಾನ್ಯ ಸಚಿವರು ಹೇಳಿದಹಾಗೆ ಆಗಿರುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ನೀವು ಹೇಳಿದಹಾಗೆ ಇದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

<u>ಕ್ರೀಡಾಂಗಣವನ್ನು ನಿರ್ಮಾಣ ಮಾಡುವುದು.</u>

348 (1731) ಶ್ರೀ ಧೃವನಾರಾಯಣ ಆರ್. (ಸಂತೇಮರಳ್ಳಿ) :– ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?